ಸಾಕ್ಷಿಗೆ ದಿನಾಂಕ 12-01-2024 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 1 P.W.: 1

ಪಾಟೀ ಸವಾಲು. 1 ರಿಂದ 4 ನೇ ಆರೋಪಿತರ ಪರ ಶ್ರೀ ವಕೀಲರಿಂದಃ-

ನನ್ನ ಅತ್ತೆಯಾದ 3 ನೇ ಆರೋಪಿತಳ ಅಣ್ಣ ನಮ್ಮ ಮದುವೆಯ ಮಾತುಕತೆಯನ್ನು ಮಾಡಿದರು. ನಮ್ಮ ಕಡೆಯಿಂದ ನಮ್ಮ ಚಿಕ್ಕಪ್ಪ ಮದುವೆಯ ಮಾತುಕತೆ ಸಮಯದಲ್ಲಿದ್ದರು. ಈ ವಿಷಯವನ್ನು ನಾನು ನನ್ನ ದೂರಿನಲ್ಲಿ ಬರೆಸಿರುವುದಿಲ್ಲ. ಏಕೆ ಈ ವಿಷಯವನ್ನು ದೂರಿನಲ್ಲಿ ಬರೆಸಿರುವುದಿಲ್ಲವೆಂದರೆ ಸಾಕ್ಷಿಯು ಏನನ್ನೂ ಉತ್ತರಿಸದೇ ಸುಮ್ಮನೆ ಇರುತ್ತಾರೆ. ನನ್ನ ಮದುವೆ ಸಮಯದಲ್ಲಿ ನನ್ನ ದೂರಿನಲ್ಲಿ ಹೇಳಿರುವಂತೆ ನಾವು ಆರೋಪಿತರಿಗೆ ರೂ.2 ಲಕ್ಷ ನಗದು ಹಣ, 5 ತೊಲೆ ಬಂಗಾರ, 30 ಗ್ರಾಂ ಬೆಳ್ಳಿ, ಕಿವಿ ಓಲೆ, ಕಾಲುಚೈನು, ಒಂದು ಕೋಟ್, ಒಂದು ಗಾಡ್ರೆಜ್, ಟೈಲರಿಂಗ್ ಮಿಶಿನ್ ಮತ್ತು ರೂ.30 ಸಾವಿರ ಬೆಲೆ ಬಾಳುವ ಕಾಲುತೊಳೆಯುವ ಸಾಮಾನುಗಳನ್ನು ಕೊಡದ ಕಾರಣ ಮದುವೆ ಮಾತುಕತೆಯಲ್ಲಿದ್ದಂತಹ ನನ್ನ ಚಿಕ್ಕಪ್ಪನ ಹೆಸರನ್ನು ನನ್ನ ದೂರಿನಲ್ಲಿ ಬೆರಸಿರುವುದಿಲ್ಲವೆಂದರೆ ಸರಿಯಲ್ಲ. ನಾನು ಮದುವೆಯಾದ ನಂತರ ನನ್ನ ಗಂಡನ ಮನೆಗೆ ಹೋಗಿ ಸಂಸಾರವನ್ನು ಮಾಡಿರುವುದಿಲ್ಲವೆಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಆತ ಇನ್ನೊಂದು ಮದುವೆ ಮಾಡಿಕೊಂಡಿರುತ್ತಾರೆಂದು ನುಡಿಯುತ್ತಾರೆ. ನನ್ನ ಮದುವೆ ನಂತರ 1 ನೇ ಆರೋಪಿ ಬೇರೆ ಮದುವೆಯನ್ನು ಮಾಡಿಕೊಂಡಿರುತ್ತಾರೆ.

2. ಮೇ 15 ರಂದು ನನ್ನ ಗಂಡ 1 ನೇ ಆರೋಪಿ ಇನ್ನೊಬ್ಬ ಮಹಿಳೆಯನ್ನು ಮದುವೆಯಾಗಿದ್ದು ಆದರೆ ವರ್ಷವನ್ನು ಹೇಳಲು ನೆನಪಿರುವುದಿಲ್ಲ. ನಾನು ನನ್ನ ಗಂಡನು ಮದುವೆಯಾದಂತಹ ಮಹಿಳೆಗೆ ನಾನು ನನ್ನ ಗಂಡನನ್ನು ಏಕೆ ಮದುವೆಯಾಗಿದ್ದೀಯಾ ಎಂದು ಕೇಳಿರುವುದಿಲ್ಲ. ಸಾಕ್ಷಿಯು ಸ್ವಇಚ್ಛೆಯಿಂದ ಮುಂದುವರೆದು ನನ್ನ ಅತ್ತೆ ಮಾವಂದಿರಾದ 3 ಮತ್ತು 4 ನೇ ಆರೋಪಿತರು ಹೊಲಮನೆಯನ್ನು ಕೊಟ್ಟಲ್ಲಿ ನಾನು ಆಕೆಯನ್ನು ನಮ್ಮ ಮನೆಗೆ ಕರೆದುಕೊಂಡು ಬರುವುದಾಗಿ ನಾನು ಅವರಿಗೆ ಹೇಳಿದ್ದೇನೆಂದು ನುಡಿಯುತ್ತಾರೆ. ಈ ವಿಷಯವನ್ನು ನಾನು ನನ್ನ ದೂರಿನಲ್ಲಿ ಬರೆದಿರುತ್ತೇನೆ.

3. ಮದುವೆಯಾದ ನಂತರ ನನಗೆ ಆರೋಗ್ಯ ಸರಿ ಇರುತ್ತಿರಲಿಲ್ಲವೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆರೋಪಿತರು ಹಿಂಸೆಯನ್ನು ಕೊಟ್ಟ ಕಾರಣ ನಾನು 4 ಸಲ ಅಸ್ವಸ್ಥಳಾದೆ ಎಂದು ನುಡಿಯುತ್ತಾರೆ. ಮದುವೆಯಾದ ನಂತರ ಈ ವಿಷಯವು 1 ರಿಂದ 4 ನೇ

ಆರೋಪಿತರಿಗೆ ತಿಳಿದಿದ್ದು, ಕಾರಣ ನಾನು ನನ್ನ ತವರುಮನೆಗೆ ಹೋದ ನಂತರ ಇಲ್ಲಿಯವರೆಗೂ ನನ್ನ ಗಂಡನ ಮನೆಗೆ ಬಂದಿರುವುದಿಲ್ಲವೆಂದರೆ ಸರಿಯಲ್ಲ.

4. ನಾನು ನನ್ನ ತವರುಮನೆಗೆ ಹೋದ ನಂತರ ಆರೋಪಿತರು ನನ್ನ ತವರುಮನೆಗೆ ಬಂದು ನನ್ನನ್ನು ಆಸ್ಪತ್ರೆಗೆ ತೋರಿಸಿ ನನ್ನ ತವರುಮನೆಗೆ ಬಿಟ್ಟು ಹೋಗಿರುತ್ತಾರೆಂದರೆ ಸರಿ. ನನ್ನ ತವರುಮನೆಯವರು ಆರೋಗ್ಯ ಸರಿಯಾದ ನಂತರ ಕಳುಹಿಸಿಕೊಡುವುದಾಗಿ ಹೇಳಿದ್ದು, ಆದರೆ ಇದುವರೆವಿಗೂ ಅವರು ನನ್ನನ್ನು ನನ್ನ ಗಂಡನ ಮನೆಗೆ ಕಳುಹಿಸಿರುವುದಿಲ್ಲವೆಂದರೆ ಸರಿಯಲ್ಲ.

5. ನನ್ನ ಚಿಕ್ಕಪ್ಪ ಹಾಗೂ ನಮ್ಮ ಮನೆಯವರಿಗೆ ನನಗೆ ಮಾನಸಿಕ ಅಸ್ವಸ್ಥತೆ ಇರುವ ಬಗ್ಗೆ ಗೊತ್ತಿದ್ದರೂ ನನ್ನ ಗಂಡನ ಮನೆಯವರಿಗೆ ಹೇಳಿರುವುದಿಲ್ಲವೆಂದರೆ ಸರಿಯಲ್ಲ. ನಾನು ನನ್ನ ಗಂಡನ ಜೊತೆ ಇರದಿದ್ದರೂ ನನಗೆ ಅಬಾಶನ್ ಆಗಿರುವುದಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರು ನನಗೆ ಅಬಾಶನ್ ಆಗುವುದಕ್ಕೆ ಮಾತ್ರೆಯನ್ನು ಕೊಟ್ಟಿರುತ್ತಾರೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರು ನನಗೆ ಟೆಂಪೋ ಕೊಡಿಸುವಂತೆ ಹಾಗೂ 2 ತೊಲೆ ಬಂಗಾರ ತರುವಂತೆ ಹೇಳಿರುವುದಿಲ್ಲವೆಂದರೆ ಸರಿಯಲ್ಲ. ಆರೋಪಿತರು ನನಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಯಾವುದೇ ಹಿಂಸೆಯನ್ನು ಕೊಟ್ಟಿರುವುದಿಲ್ಲವೆಂದರೆ ಸರಿಯಲ್ಲ.

6. ನಮ್ಮ ತಂದೆ ತಾಯಿಗೆ ಒಟ್ಟು 4 ಎಕರೆ ಭೂಮಿ ಇರುತ್ತದೆ. ಆರೋಪಿತರು ನಮ್ಮಿಂದ ಯಾವುದೇ ವರದಕ್ಷಿಣೆ ಹಣ ಮತ್ತು ಬಂಗಾರವನ್ನು ಕೇಳಿಲ್ಲವೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನನ್ನು ಆರೋಪಿತರು ನಿಪ್ಪಾಣಿಗೆ ಕರೆದುಕೊಂಡು ಹೋಗಿದ್ದರೆಂದು ನುಡಿಯುತ್ತಾರೆ ಹಾಗೂ ಈ ವಿಷಯವನ್ನು ನನ್ನ ದೂರಿನಲ್ಲಿ ಬರೆಸಿಲ್ಲವೆಂದರೆ ಸರಿ.

(ಆರೋಪಿತರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶವನ್ನು ಕೇಳಿದರು, ನೀಡಲಾಯಿತು)

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ